II. ಈ ಹರಾಜು ಫಾರೆಸ್ಟ್ ಕ್ಷೇತ್ರವೇಟರ್ ಸಾಹೇಬರವರ ಮಂಜೂರಾತೀಗೆ ವಳಪಟ್ಟು ಇರುತ್ತೆ.

III. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವ ಕಾರಣವು ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ರಮ ನಡಿಸುವ ಆಫಿಸರವರಿಗೆ ಅಧಿಕಾರವಿರುತ್ತೆ.

IV. ಸವಾಲ್ದಾರನು ಸವಾಲ್ ಮಾಡುವದಕ್ಕೆ ಮುಂಚೆಯೆ 25 ರೂಪಾಯಿಗಳು ಡಿಪಾಜಿಟ್ಟು ಹಾಜರ್ಮಾಡಬೇಕು. ಆ ಮೊಬಲಗು ಮಂಜೂರಾದ ಸವಾಲ್ದಾರನ ಹೊರ್ತು ಹರಾಜು ಕೈದಾದ ಮೇಲೆ ಇತರರದು ವಾಪಸು ಮಾಡಲ್ಪಡುವದು. ಆ ಮೊಬಲಗನ್ನು ಮತ್ತು ಷರತ್ತು ಮೇರೆ ನಡಿಯಲು ಮಂಜೂರಾದ ಸವಾಲ್ದಾರನು ಇಡಬೇಕಾದ 25 ರೂಪಾಯಿ ಜುಮ್ಲಾ 50 ರೂಪಾಯಿಗಳನ್ನು ಗವರ್ನ್ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡುತ್ತೆ.

V. ಮಂಜೂರಾದ ಸವಾಲುದಾರನು ಪ್ರತಿ ಸಾವಿರ ಮೊತ್ತ ಅಳತೆಯಾದಹಾಗೆಲ್ಲಾ ಅಂಥಾ ಸಾವಿರ ಮೊತ್ತದ ಕಿಮ್ಮತ್ತನ್ನು ಪಾವತಿ ಮಾಡಬೇಕು. ನುತ್ತು ಸರಿಯಾದ ಸ್ಟ್ಯಾಂಪು ಕಾಗದ್ದಲ್ಲಿ ಈ ಕೆಳಗಣ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಕೂಪು ಯಾ ಕಂಪಾರ್ಟ್‌ಮೆಂಟನ್ನು ಪುನಹಾ ಹರಾಜು ಮಾಡಿಸಲಾದೀತು. ದುಸರಾ ಹರಾಜಿನಲ್ಲಿ ಏನಾದರೂ ಲುಕ್ಸಾನು ಬಂದರೆ ಮೊದಲಿನ ಹರಾಜುದಾರನು ಭರ್ತಿಮಾಡಿ ಕೊಡಬೇಕು. ಆದರೆ ಫಾಯಿದೆ ಏನಾದರೂ ಬಂದರೆ ಅಂಥಾ ಫಾಯಿದೇಗೆ ಈತನು ಭಾಗಿಯಾಗುವದಿಲ್ಲ.

ಷ ರ ತ್ತು ಗ ಳು.

1. ಸಂದಲ್, ಅಳಲೆ, ಹುಣಸೆ, ಜಾಲಾರಿ ಗಿಡಗಳು, ಎಕರೆ ಬಂದಕ್ಕೆ ಸರಾಸರಿ 40ರ ಕಿಂತ ಜಾಸ್ತಿ ಇಲ್ಲದೆ ಗುರ್ತುಮಾಡಿರುವ ಮತ್ತು ಸೊಪ್ಪಿಗೆಳು ಅಂದರೆ ಸುತ್ತು ಅಳತೆ ಬಂದು ಅಡಿ ಬಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಎಲ್ಲಾ ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಕತರಾಯಿಸಬೇಕು.

2. ಸಾವಿಯನ್ನು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉಪಹತಿ ಉಂಟು ದರೆ, ಕಂಟ್ರಾಕ್ಟ್‌ದಾರನು ಡಿ|| ಫಾರೆಸ್ಟ್ ಆಫಿಸರವರು ಗೊತ್ತು ಮಾಡುವ ಲುಕ್ಸಾನ್ ಮೊಬಲಗನ್ನು ಸರಕಾರಕ್ಕೆ ಪಾವತಿ ಮಾಡಬೇಕು.

3. ತಂಗಡಿ ಮತ್ತು ಕಕ್ಕೆ ಇವುಗಳು ಈ ಹರಾಜಿನಲ್ಲಿ ಕೇರಿ ಇಲ್ಲ. ಅಲ್ಲದೆ ಫಲಗಳು ಬಿಡುವ ಅಂದರೆ ಬ್ಯಾಲ ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಹುಣಿಸೆ, ಅಳಲೆ ಇವೇ ಮೊದಲಾದ ಯಾವದೂ ಹರಾಜಿಗೆ ಕೇರಿ ಇಲ್ಲ. ಉಳಕಿಕೊಂಡಿರುವ ಸಂದಲ್, ಅಳಲೆ, ಹುಣಸೆ, ಗುರ್ತಿಗೋಸ್ಕರ ಬಿಟ್ಟಿರುವ ಮರಗಳ ವಿನಹಾ ಕಡಿಯಬಹುದಾದ ಇನ್ಯಾವ ಮರಗಳನ್ನು ಆದರೂ ಮುನ್ಸಾನೆಯಾಗಿ ಕಡದರೆ ಅಂಥಾದ್ದೆಲ್ಲಾ ಇಲಾಖಾ ಮೂರಿಫತ್ತು ಕಾಪಿಸ್ಸು ಮಾಡಿಸಿ ತಗಲುವ ಲಾಗವಡನ್ನು 50 ರೂಪಾಯಿನ ಸೆಕ್ಯೂರಿಟಿ ಹಣದಿಂದ ವಸೂಲ್ಮಾಡುತ್ತೆ.

4. ಸಾವಿ ಮತ್ತು ಚಾಬೀನೆ ಕತರಾವಣಿ ಮತ್ತು ಸಾಗಿಸತಕ್ಕದ್ದನ್ನೆಲ್ಲಾ 1903ನೇ ಇಸವಿ ಜುಲೈ ಆಖೈರುವಳಗಾಗಿ ಪೂರೈಸಿಕೊಳ್ಳಬೇಕು. ಹಾಗೆ ಮಾಡದೆ ಇದ್ದರೆ ಕಂಟ್ರಾಕ್ಟ್‌ದಾರನು ಪಾವತಿ ಮಾಡಿರುವ ಮೊಬಲಗನ್ನು ಸರಕಾರಕ್ಕೆ ಸೇರಿಸಕೊಟ್ಟುವದಲ್ಲದೆ ಮೇಲ್ಕಂಡ ಸಾವಿ ಮತ್ತು ಚಾಬೀನೆ ಕತರಾವಣಿ ವ ಸಾಗಿಸತಕ್ಕ ಹಕ್ಕುದಾರಿಯು ಸಹಾ ಆ ತಾರೀಖಿನಿಂದ ರದ್ದು ಆಗಿರುತ್ತೆ.

5. ಕಂಟ್ರಾಕ್ಟ್‌ದಾರ ಖಾಯಿಪ್ಮಾಡುವ ಸಾವಿ ಮೊತ್ತಕ್ಕೆ ತೇದಾದು ಆದ ದರ ಗಾಡಿ ಜೋಜಾ ಬಂದಕ್ಕೆ 34 ಸಲೆ ಅಡಿ ಅಥವಾ ಟರ್ ಬಂದಕ್ಕೆ 68 ಸಲೆ ಅಡಿ ಈ ಮೇರೆ ಹಾಸಲ್ ಯಾ ತೀರ್ವೆ ಮೊಬಲಗು ಪಾವತಿ ಮಾಡಿದ ನಂತರ ರೇಂಜ್ ಫಾರೆಸ್ಟ್ ಆಫಿಸರವರು ಬಾಬು ರೂಢಿಸುವದಕ್ಕೆ ಲೈಸೆನ್ಸ್ ಕೊಡುತ್ತಾರೆ. ರೂಢಿಸಿದ ಬಾಬು ರಫ್ತು ಮಾಡಿಕೊಳ್ಳಲು ಸ್ಥಳದಲ್ಲಿರುವ ಫಾರೆಸ್ಟ್ ನೌಕರರು ರಹದಾರಿ ಕೊಡುತ್ತಾರೆ.

6. ಕೂಪು ಯಾ ಕಂಪಾರ್ಟುಮೆಂಟಿನಿಂದ ಚಾಬೀನೆ ಮತ್ತು ಸಾವಿಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತಮಯವಾದ ಮೇಲೆ ಸಾಗಿಸಕೂಡದು. ಕತರಾವಣಿ ಕೆಲಸಕ್ಕಾಗಿ ಕೊಟ್ಟು ಇರುವ ಕೂಪಿನಲ್ಲಿ ಆಗಲಿ ಅಥವಾ ಸಾವಿ ಗಾಡಿ ಮಾರ್ಗಗಳಲ್ಲಿ ಆಗಲಿ ಬೇಸಿಗೆ ಕಾಲದಲ್ಲಿ ಅಂದರೆ 1903ನೇ ಫೆಬ್ರವರಿ 1ರ ಲಾಗಾಯಿತು 1903ನೇ ಮೇ 31ರ ವರಿಗೆ ಏನಾದರೂ ಬೆಂಕಿ ಬಿದ್ದು ಅದು ಕಂಟ್ರಾಕ್ಟ್‌ದಾರನ ಅಥವಾ ಆತನಕಡೆ ಜನರ ಅಜಾಗ್ರತೆಯಿಂದ ವುಂಟಾದ್ದೆಂದು ಡಿ|| ಫಾರೆಸ್ಟ್ ಆಫಿಸರವರಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟ್‌ದಾರನೇ ಜವಾಬ್ ಮಾಡಬೇಕು.

7. ಕಂಟ್ರಾಕ್ಟ್‌ದಾರನ ಕಡೆ ಗಾಡಿಯವರು ರೈಲ್ವೆ ಸ್ಟೇಷನ್‌ಗೆ ಬರುವಾಗ್ಯೆ ಸ್ಟೇಟು ಯಾ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಹಣಿ ಸಾವಿಯನ್ನು ಕಡದ್ದೇ ಆಗಲಿ ಅಥವಾ ಕಡದು ರಫ್ತು ಮಾಡುವದೇ ಆಗಲಿ ಕಂಡುಬಂದಲ್ಲಿ ಅಂಥಾವರನ್ನು ಫಾರೆಸ್ಟ್ ರೆಗ್ಯುಲೇಷನ್ ಪ್ರಕಾರ ಪ್ರಾಸಿಕ್ಯೂಷನ್‌ಗೆ ಗುರಿಮಾಡಲ್ಪಡುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ಅಜ್ಜಪಲ್ಲಿ ಗ್ರಾಮದ ಕೃಷ್ಣಪ್ಪ, ಗಂಗಾಧರಪ್ಪ ವಗೈರೆ 4 ಜನರಿಂದ ಬರಬೇಕಾದ ಜಮೀರ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ಕಜೇರಿಯಲ್ಲಿ ಅಮಲ್ದಾರ್ ಅಥವಾ ಅ|| ಕ|| ಸಾ|| ರುಬರೂಬು 28—4—1903ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—03ರ ವರಿಗೆ ಪೂರ್ತಿಯಾಗಿ * ಪಟ್ಟೀದಾರ್ರ ಅಥವಾ ಅನುಭವದಾರ್ರ ಬಾಬತು ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 700—5—4 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಕವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ನಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ॥ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ನ್ಯೂನತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಕವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕರ್ನೂನಿಂದ ವಿಧಿಸಲ್ಪಟ್ಟ ವಾಕ್ಯದಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಖಾತಾ ಮಾಲೀಕನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಅಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.	
								ಎ. ಗು.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ	ಹುತ್ತೂರು	ಜೋಡಿ ಅಚ್ಚಪ್ಪಳ್ಳಿ	1 ಕೃಷ್ಣಪ್ಪ, 2 ಗಂಗಾಧರಪ್ಪ ಇನ್ನೈರೆ 4 ಜನ	..	...	ಜೋಡಿ ಅಚ್ಚಪ್ಪಳ್ಳಿ ಪೂರಾ ಗ್ರಾಮ.	ಪರಂಪೋಕು	48 37	... ...	9 0 0	ವಿಳಂಬಿ
							ಖುಷ್ಕಿ	263 6	258 4 0	63 10 1	ವಿಕಾರಿ
							ತರಿ	24 6	92 6 0	208 14 5	ಶಾರ್ವರಿ
							ಬಾಗಾಯತು	3 11	12 0 0	208 14 5	ಪ್ಲವ
										208 14 5	ಶುಭಕೃತು
							ಜುಮ್ಲಾ ..	339 20	362 10 0	699 5 4	
										0 8 0	ನೋಟಿಸು ಫೀಜು
										0 8 0	ಇಸ್ತಿಹಾರ್ ಫೀಜು
							ಈ ವಿಸ್ತೀರ್ಣವುಳ್ಳ ಪೂರಾ ಗ್ರಾಮ			700 5 4	ಇದರ ಬಡ್ಡಿ ರೂಲ್ಸು ಮೇರಿಗೆ ಬರಬೇಕು.

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್ ತಾರೀಖು 4ನೇ ಮಾರ್ಚಿ 1903.

ಇದರಿಂದ ಯಲ್ಲರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟ್ ಪಾವಗಡ ತಾಲ್ಲೂಕಿನ ಯಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳಲ್ಲಿಯೂ ಮತ್ತು ಸರಕಾರ ವ್ಯವಸ್ಥೆಗೆ ವಳಪಟ್ಟ ಜಮೀನಿನಲ್ಲಿಯೂ ಇರುವ ತಂಗಡಿ ಚಕ್ಕೆ ಮತ್ತು ಕಕ್ಕೆ ಚಕ್ಕೆ ಇವುಗಳನ್ನು 1903ನೇ ಏಪ್ರಿಲ್ 15ನೇ ತಾರೀಖು ಲಾಗಾಯತು 1904ನೇ ಜೂ೯ 30ನೇ ತಾರೀಖು ವರಿಗೆ ಕಡದು ಸಾಗಿಸಿಕೊಳ್ಳತಕ್ಕ ಹಕ್ಕು ದಾರಿಯು 1903ನೇ ಮಾರ್ಚಿ 26ನೇ ತಾರೀಖಿನಲ್ಲಿ ತುಮಕೂರು ಪೊಕ್ಕಾಂನಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಲಾಗಲಿ ಅಥವಾ ಅವರಿಂದ ನೇಮಿಸುವ ಇತರ ಆಫಿಸರಿಂದಲಾಗಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

ಷರಾ :—ಅವಶ್ಯಕವಿದ್ದರೆ ಸಮ್ಮತವಾದ ಹರಾಜು ಮಾಡಲ್ಪಡುವದು.

2. ಮೇಲ್ಕಂಡ ತಾರೀಖು ಮಧ್ಯಾಹ್ನದಲ್ಲಿ ಹರಾಜು ಪ್ರಾರಂಭಿಸುತ್ತೆ. ಹರಾಜು ಡೆಪ್ಯುಟಿ ಕಮಿಷನರ್ ಸಾಹೇಬರವರ ಮುಂಜಾರಾತಿಗೆ ವಳಪಟ್ಟು ಇರುತ್ತೆ.

3. ಸವಾಲ್ಮಾಡುವದಕ್ಕೆ ವುದ್ದೇಶವುಳ್ಳವರು ಖುದ್ದಾಗಲಿ ಅಥವಾ ಕ್ರಮಪ್ರಕಾರ ಅಧಿಕಾರ ಪಡದ ವಿಜಂಟರ ಮೂಲಕವಾಗಿ ಆಗಲಿ ಹರಾಜಿಗೆ ಬರತಕ್ಕದ್ದು.

4. ಚಡ ಸವಾಲ್ದಾರನು ತನಿಗೆ ಹರಾಜು ಮುಂಜಾರಾದ ಕ್ಷಣವೆ ಬಟ್ಟು ಹರಾಜು ಮೊಬಲಗು ಮತ್ತು ಆ ಬಟ್ಟು ಹಣಕ್ಕೆ ರೂಪಾಯಿಗೆ ಬಂದಾಣೆ ಮೇರೆ ಲೋಕಲ್ ಸೆಸ್ಸು ಸೇರಿ ಆಗುವ ಮೊಬಲಗಿನಲ್ಲಿ ಕಾಲುಹಿಸ್ಸೆ ಡಿಪಾಜಿಟ್ ಹಣವನ್ನು ಹಾಜರ್ಮಾಡಬೇಕು. ಬಾಕಿ ಮುಕ್ಕಾಲುಹಿಸ್ಸೆ ಮೊಬಲಗನ್ನು ಬಾಬು ಸುಪರ್ದು ಮಾಡುವದಕ್ಕೆ ಮುಂಜೆಯೆ ಅಂದರೆ ಚಾಲತಿ ಸಾಲ್ ಏಪ್ರಿಲ್ 15ನೇ ತಾರೀಖಿನ ವಳಗಾಗಿ ಪೂವತೆ ಮಾಡಬೇಕು. ಆ ತಾರೀಖು ಪೂರ್ವವೆ ಹರಾಜು ಮುಂಜಾರಿ ಆತನಿಗೆ ತಿಳಿಸಲಾಗುತ್ತೆ. ಆ ಮೇರೆ ಮೊಬಲಗು ಪೂವತಿ ಮಾಡದೆ ತಪ್ಪಿದರೆ ಮೊದಲು ಡಿಪಾಜಿಟ್ ಇಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಹೋಗುತ್ತ ಅಲ್ಲದೆ ಬಾಬು ರೂಡಿಸಿಕೊಳ್ಳುವ ಹಕ್ಕು ಸಹಾ ರದ್ದುಮಾಡಿ ಬಾಬನ್ನು ಪುನಹಾ ಹರಾಜು ಮಾಡಿಸುತ್ತೆ.

5. ಮೇಲ್ಕಂಡಂತೆ ನಡಿಸುವ ದುಸರೆ ಹರಾಜು ಅವಲ್ ಹರಾಜುದಾರನನ್ನು ನಷ್ಟಕ್ಕೆ ಗುರಿಪಡಿಸುತ್ತೆ. ಲಾಭ ಬಂದರೆ ಅತನಿಗೆ ಏನೂ ಹಕ್ಕು ಇರುವದಿಲ್ಲಾ. ಅವಲ್ ಹರಾಜಿನಲ್ಲಿ ಆಖೈರ್ ಸವಾಲ್ ನಿಂತ ಮೊಬಲಗಿಗು ದುಸರೇ ಹರಾಜಿನಲ್ಲಿ ಚಡಸವಾಲ್ ಮೊಬಲಗಿಗು ಮಧ್ಯೆ ಎಷ್ಟು ಕವ್ಮಿಬರುತ್ತೆ ಅಷ್ಟು ಹಣವನ್ನು ಅವಲ್ ಹರಾಜುದಾರನಿಂದ ರವಿನ್ಯೂ ಕಂದಾಯದಂತೆ ವಸೂಲು ಮಾಡಲಾದೀತು.

6. ಹರಾಜು ಮುಂಜಾರಿ ತಿಳಿಸಿದ ತಾರೀಖು ಲಾಗಾಯತು 3 ದಿವಸದಲ್ಲಿ ಚಡ ಸವಾಲ್ದಾರನು ಸರಿಯಾದ ಸ್ಟ್ಯಾಂಪು ಕಾಗದ್ದಲ್ಲಿ ಈ ಕೆಳಗೆ ಕಂಡ ಷರತ್ತುಗಳ ಮೇರೆ ನಡಕೊಳ್ಳಲು ಬದ್ಧನಾಗಿ ಎಗ್ರಿಮೆಂಟು ಬರದು ಸೈನುಮಾಡಿ ಕೊಡಬೇಕು.

ಷರತ್ತುಗಳು.

(1) ಬಂದು ವರುಷದ ವಳಗೆವುಳ್ಳ ಗಿಡ ಕಡೀಕೂಡದು.

(2) ಚಕ್ಕೆ ತೆಗದಮೇಲೆ ನಿಲ್ಲುವ ಕಡ್ಡಿಗಳೆಲ್ಲಾ ಹರಾಜುದಾರನ ಸ್ವತ್ತೇ ಆಗಿರುತ್ತೆ.

(3) ಆಗಾಗ್ಯೆ ಸಾಗಿಸಿಕೊಳ್ಳುವ ಚಕ್ಕೆ ಮೊತ್ತಾ ತಪಶೀಲ್ ತೋರಿಸುವ ಲೆಖ್ಕ ಇಡಬೇಕು. ಅಮಲ್ದಾರ್ರು ಮತ್ತು ಇತರ ಆಫಿಸರು ಈ ಲೆಖ್ಕಗಳನ್ನು ತನಿಖೆ ಮಾಡುವದಕ್ಕೆ ಅವಕಾಶ ಕೊಡಬೇಕು.

(4) ಚಕ್ಕೆ ಸಾಗಿಸಿಕೊಳ್ಳುವದಕ್ಕೆ ಪಾಲೆಸ್ಸು ಇಲಾಖೆ ಮೂರೀಫತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರು ಯಾವ ರೀತಿ ವಿಧಿಸುತ್ತಾರೋ ಆರೀತೀಲಿ ಪ್ಯಾಸ್ ಪಡೀಬೇಕು.

(5) 1904ನೇ ಇಸವಿ ಜೂ೯ ಆಖೈರು ಒಳಗಾಗಿ ಕಡದು ಜಮಾಯಿಸಿ ದಾಸ್ತಾನಾಗಿ ಇಟ್ಟುಕೊಂಡಿರುವ ಎಲ್ಲಾ ಚಕ್ಕೆಯನ್ನು ತಾಲ್ಲೂಕು ಸರಹದ್ದು ಹೊರಕ್ಕೆ ಸಾಗಿಸಿಕೊಳ್ಳಬೇಕು.

(6) ಚಕ್ಕೆ ತೆಗದುಕೊಳ್ಳುವದಕ್ಕೆ ಹೊರ್ತು ಗೊಬ್ಬರಕ್ಕೆ, ಸಪ್ಪುಗೋಸ್ಕರವಾಗಿ ಆಗಲಿ, ಸೌದೆಗಾಗಿ ಆಗಲಿ ಅಥವಾ ಇತರ ಕೆಲಸಗಳಿಗಾಗಲಿ, ತಂಗಡಿ ಗಿಡಗಳನ್ನು ಕಡೀಕೂಡದು.

(7) ಈ ಷರತ್ತುಗಳಲ್ಲಿ ಯಾವ ಷರತ್ತಿಗೆ ವಿರುದ್ಧ ನಡದರೂ ಕಂಟ್ರಾಕ್ಟನ್ನು ರದ್ದು ಮಾಡುವದಲ್ಲದೆ ಹೊರಗೆ ರಪ್ಪು ಮಾಡಿಕೊಳ್ಳದೆ ನಿಲ್ಲಿಸಿರುವ ವಿಶಿಷ್ಟ ಚಕ್ಕೆಯೂ ಸರಕಾರಕ್ಕೆ ಸೇರಿಸಿಕೊಳ್ಳಲಾದೀತು.

ಎಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸ್ ೧೯೦೨—1903ನೇ ಇಸವಿ ಮಿ|| ಅರ್ಜೀ ನಂಬರ್ 48.

ವ್ಯತಪಟ್ಟು ಬಿ. ವೆಂಕಟರಮಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಗಿರಿಯಮ್ಮ, ಕಾವೇರಮ್ಮ, ವ್ಯತಪಟ್ಟು ಸದರೀ ಬಿ. ವೆಂಕಟರಮಣಯ್ಯನವರಿಗೆ ಹೆಂಡತಿಗಳಾಗಬೇಕೆಂಬ ಹಕ್ಕು ದಾರಿಮೇಲೆ ಮಂಡ್ಯಾ ತಾಲ್ಲೂಕು ತೆಗಟೂರು ಸ್ಥಳದ ನಾಸಸ್ಥರಾಗಿ ವ್ಯತಪಟ್ಟು ಬಿ. ವೆಂಕಟರಮಣಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ರೆಗ್ಯುಲೇಷನ್ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗಿರಿಯಮ್ಮ, ಕಾವೇರಮ್ಮನ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳ [illegible]ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಜವಾಬ್ದಾತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟು ಬಿ. ವೆಂಕಟರಮಣಯ್ಯನವರ ಆಸ್ತಿಗೆ ಹಕ್ಕುದಾರರಾಪ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಫೆಬ್ರುವರಿ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಶಿ ನನ್ನ ದಸ್ತಖತ್ತೊಡನೆ ಕೊಡೋಣಾಗಿ ಇದೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 49.

ಮೃತಪಟ್ಟ ಸುಬ್ಬರಾಯ ಮೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ವಿಕಾಂಬರಂ ಮೊದಲಿಯಾರ್ರು, ಮೃತಪಟ್ಟ ಸದರೀ ಸುಬ್ಬರಾಯ ಮೊದಲಿಯಾರ್ರಿಗೆ ಮುಖ್ಯ ವಾರಸ್ದಾರೆ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ಶಿವನಚೆಟ್ಟಿ ತೋಟದ ಬೀದಿ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯ ಮೊದಲಿಯಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವಿಕಾಂಬರಂ ಮೊದಲಿಯಾರ್ರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯ ಮೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೨—೧೯೦೩ನೇ ಇಸವಿ ಮಿ|| ಅರ್ಜೀ ನಂಬರ್ 50.

ಮೃತಪಟ್ಟ ಚಿಕ್ಕ ವೆಂಕಟರಾಜು ಯುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ವೆಂಕಟರಾಜು, ಮೃತಪಟ್ಟ ಸದರೀ ಚಿಕ್ಕವೆಂಕಟರಾಜುಯವರಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಡಿಸ್ಟ್ರಿಕ್ಟು ಆನೆಕಲ್ ಕಸಬಾ ಸ್ಥಳಿದ ವಾಸಸ್ಥರಾಗಿ ಮೃತಪಟ್ಟ ಚಿಕ್ಕವೆಂಕಟರಾಜುರವರ ಜಿಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ರೆಗ್ಯುಲೇಷನ್ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರಾಜುಯವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕ ವೆಂಕಟರಾಜುಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಫೆಬ್ರುವರಿ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇಧೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 51.

ಮೃತಪಟ್ಟ ಸುಬ್ಬಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಗಂಗಮ್ಮ, ಕಾಳಮ್ಮ, ಮೃತಪಟ್ಟ ಸದರೀ ಸುಬ್ಬಣ್ಣನವರಿಗೆ ಮುಖ್ಯ ವಾರಸುದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಡಿ|| ದೊಡ್ಡಬಳ್ಳಾಪುರ ತಾ|| ಹುಲಕುಂಟೆ ಹೋ|| ದೊಡ್ಡ ಬೆಳವಂಗಳದಲ್ಲಿ ವಾಸಸ್ಥರಾಗಿ ಮೃತ ಪಟ್ಟ ಸುಬ್ಬಣ್ಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗಂಗಮ್ಮ, ಕಾಳಮ್ಮನ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಫೆಬ್ರುವರಿ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೨—೧೯೦೩ನೇ ಇಸವಿ ಮಿ|| ಅರ್ಜೀ ನಂಬರ್ 53.

ಮೃತಪಟ್ಟ ಮೈಸೂರು ಶಾಮರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶೀತಾರಾಮಯ್ಯ, ಮೃತಪಟ್ಟ ಸದರೀ ಮೈಸೂರು ಶ್ಯಾಮರಾಯರ ಮಗಳು ನಂಜಮ್ಮನ ಗಾರ್ಡಿಯರ್ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಶ್ಯಾಮರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶೀತಾರಾಮಯ್ಯನವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಾಮರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಫೆಬ್ರುವರಿ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 54.

ಮೃತಪಟ್ಟ ತಂಬುಸಾಮಿಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶಿ. ರಾಜು, ಮೃತಪಟ್ಟ ಸದರೀ ತಂಬುಸಾಮಿ ಯವರಿಗೆ ತಮ್ಮನಾಗಬೇಕೆಂಬ ಹಕ್ಕು ದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ತಂಬುಸಾಮಿಯವರ ವಿಲ್ ಪ್ರಕಾರ ಸ್ ೧೮೬೫ನೇ ಇಸವಿ 10ನೇ ನಂಬರ್ ಆಕ್ಟ್ ಮೇರಿಗೆ ಪ್ರಬೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿ. ರಾಜು ಯವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು ತಾರೀಖು 26ರಲ್ಲು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಂಬುಸಾಮಿಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಫೆಬ್ರವರಿ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 56.

ಮೃತಪಟ್ಟ ಸೋಮಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮಲ್ಲಮ್ಮ, ಗಾರ್ಡಿಯರ್ ಮಂಜಮ್ಮ, ಮೃತಪಟ್ಟ ಸದರೀ ಸೋಮಪ್ಪನವರಿಗೆ ಮುಖ್ಯ ವಾರಸುದಾರ್ರು ಆಗಬೇಕೆಂಬ ಹಕ್ಕು ದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಸೋಮಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ನಂಬರ್ ರೆಗ್ಯುಲೇಷ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದಾರಖಾಸ್ತುದಾರರಾದ ಮಲ್ಲಮ್ಮನವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೋಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಫೆಬ್ರವರಿ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 60.

ಮೃತಪಟ್ಟ ವೆಂಕಟಾಚಲ ಮೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ವೇಲೂರು ಕೃಷ್ಣಸಾಮಿ ಮಾಣಿಕ್ಯಮೊದಲಿಯಾರ್ರು, ಮೃತಪಟ್ಟ ಸದರೀ ವೆಂಕಟಾಚಲ ಮೊದಲಿಯಾರ್ರಿಗೆ ಮುಖ್ಯ ವಾರಸುದಾರ್ರು ಆಗಬೇಕೆಂಬ ಹಕ್ಕು ದಾರಿ ಮೇಲೆ ಕೋಲಾರದ ಡಿಸ್ಟ್ರಿಕ್ಟು ಮೂಲೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ವೆಂಕಟಾಚಲ ಮೊದಲಿಯಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರು ರೆಗ್ಯುಲೇಷ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣಸಾಮಿ ಮಾಣಿಕ್ಯಮೊದಲಿಯಾರ್ರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಾಚಲ ಮೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಫೆಬ್ರವರಿ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 67.

ಮೃತಪಟ್ಟ ಯಾಕೂಫ್ ಸಾಬರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ರುಕ್ಕಾಬಿ, ಹಬಿಬಿ, ಖಾಶಿಂಸಾಬರು, ಮೃತಪಟ್ಟ ಸದರೀ ಯಾಕೂಫ್‌ಸಾಬರಿಗೆ ಮುಖ್ಯವಾರ್ಸು ಆಗಬೇಕೆಂಬ ಹಕ್ಕುದಾರಿ ಮೇಲೆ ನಾರ್ತ್ ಆರಕಾಟು ತಾ॥ ಮಾಯಿವರಂ ವಾಸಸ್ಥರಾಗಿ ಮೃತಪಟ್ಟ ಯಾಕೂಫ್‌ಸಾಬರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ನಂಬರ್ ರೆಗ್ಯುಲೇಷ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರುಕ್ಕಾಬಿ ವಗೈರೇರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಯಾಕೂಬ್‌ಸಾಬರ್ದ ಆಸ್ತಿಗೆ ಹಕ್ಕುದಾರ್ರಾದ ವಿಶಿಷ್ಟರು ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

ಸ್ ೧೯೦೩ನೇ ಇಸವಿ ಫೆಬ್ರವರಿ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟು ಜಡ್ಜ.

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 184.

ಅರ್ಜೀದಾರ್ರು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಪುಟ್ಟಸೋಮನಹಳ್ಳಿಯಲ್ಲಿರುವ ದೇವಮ್ಮ ಮೈನರ್, ಗಾರ್ಡಿಯನ್ ನರಸುಂಹ ಗೌಡ, ಮೈನರಾದ ಪುಟ್ಟಸೋಮನಹಳ್ಳಿ ಸ್ಥಳದ ಬೋರೈಸ ಹೆಂಡತಿ ದೇವಮ್ಮನವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ದೇವಮ್ಮನವರಿಗೆ ತಂದೆ ಆಗಬೇಕೆಂಬ ಹಕ್ಕಿನ ಮೇಲೆ ಪುಟ್ಟಸೋಮನಹಳ್ಳಿ ಸ್ಥಳದ ನರಸುಂಹ ಗೌಡರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ ೧೯೦೩ನೇ ಇಸವಿ ಮಾರ್ಚಿ ತಾರೀಖು 16ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ ೧೯೦೩ನೇ ಇಸವಿ ಫೆಬ್ರವರಿ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 212.

ಅರ್ಜೀದಾರ್ರು ಹುಣಸೂರಿನಲ್ಲಿರುವ ಚನ್ನರಾಯಪಟ್ಟಣದ ನಾರಾಯಣಶೆಟ್ಟರ ಮಗ ವೆಂಕಟಸುಬ್ಬಶೆಟ್ಟ, ಮೈನರಾದ ಹುಣಸೂರು ಸ್ಥಳದ ನಾಗಪ್ಪಶೆಟ್ಟ ಮಗ ಸುಬ್ಬಶೆಟ್ಟರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಸುಬ್ಬಶೆಟ್ಟರಿಗೆ ಸೋದರಮಾವನು ಆಗಬೇಕೆಂಬ ಹಕ್ಕಿನ ಮೇಲೆ ಹುಣಸೂರು ಸ್ಥಳದ ವೆಂಕಟಸುಬ್ಬಶೆಟ್ಟರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 17ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 268.

ಅರ್ಜೀದಾರ್ರು ಯಡತೊರೆಯಲ್ಲಿರುವ ವೇಲುಮನೆ ಗುಂಡಾಭಟ್ಟರ ಮಗ ನಂಜುಂಡ ಮೈನರ್, ಗಾರ್ಡಿಯನ್ ನಂಜುಂಡಯ್ಯ, ಮೈನರಾದ ಯಡತೊರೆ ಸ್ಥಳದ ಭವತಿ ಗುಂಡಭಟ್ಟರ ಮಗ ನಂಜುಂಡನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ನಂಜುಂಡನಿಗೆ ಗಾರ್ಡಿಯನ್ ಆಗಬೇಕೆಂಬ ಹಕ್ಕಿನ ಮೇಲೆ ಯಡತೊರೆ ಸ್ಥಳದ ನಂಜುಂಡಯ್ಯನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜೀ ಹಿಯರಿಂಗ್ ಬಗ್ಗೆ ಸ್ ೧೯೦೩ನೇ ಇಸವಿ ಮಾರ್ಚಿ ತಾರೀಖು 20ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 292.

ಅರ್ಜೀದಾರ್ರು ಶ್ರೀರಂಗದಪಟ್ಟಣ ತಾಲ್ಲೂಕು ಶ್ರೀರಂಗಪಟ್ಟಣದಲ್ಲಿರುವ ಬೋರೈಯ್ಯನ ಮಗ ಹಳ್ಳಿ ಲಿಂಗಯ್ಯ, ಮೈನರಾದ ಶ್ರೀರಂಗಪಟ್ಟಣ ಸ್ಥಳದ ಭೈರಂಣನ ಮಗಳಮಗನಾದ ಅಂದಾನಿಯ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಅಂದಾನಿಗೆ ಜನಕ ತಂದೆ ಆಗಬೇಕೆಂಬ ಹಕ್ಕಿನ ಮೇಲೆ ಶ್ರೀರಂಗಪಟ್ಟಣ ಸ್ಥಳದ ಹಳ್ಳಿ ಲಿಂಗಯ್ಯ, ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ ೧೯೦೩ನೇ ಇಸವಿ ಮೇ ತಾರೀಖು 29ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 293.

ಅರ್ಜೀದಾರು, ಶ್ರೀರಂಗಪಟ್ಟಣ ತಾಲ್ಲೂಕು ಗಂಜಾಂನಲ್ಲಿರುವ ಕೆಂಚಮ್ಮನ ದೊಡ್ಡಣ್ಣನ ಮಗ ಮುದ್ದಯ್ಯ, ಮೈನರಾದ ಗಂಜಾಂ ಸ್ಥಳದ ಬಾಲ ದಾಸಪ್ಪನ ಮಗ ಚಿಕ್ಕ ನರಸಯ್ಯನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಚಿಕ್ಕ ನರಸಯ್ಯನಿಗೆ ಚಿಕ್ಕಪ್ಪನು ಆಗಬೇಕೆಂಬ ಹಕ್ಕಿನಮೇಲೆ ಗಂಜಾಂ ಸ್ಥಳದ ಮುದ್ದಯ್ಯನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ ೧೯೦೩ನೇ ಇಸವಿ ಮೇ ತಾರೀಖು 29ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 294.

ಅರ್ಜೀದಾರ್ರು ಮೈಸೂರು ಚಾಮರಾಜಪೇಟೆಯಲ್ಲಿರುವ ಭವತಿ ಆದ ಹಿಂದೂಪುರದ ವೆಂಕಟರಮಣಾಚಾರ್ರ ಹೆಂಡತಿ ವೆಂಕಟಲಕ್ಷ್ಮಮ್ಮ, ಮೈನರಾದ ಮೈಸೂರು ಸ್ಥಳದ ವೆಂಕಟರಮಣಾಚಾರ್ರ ಮಗ ಕಂಠೀರವಾಚಾರ್ಯನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಕಂಠೀರವಾಚಾರ್ಯನಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಮೈಸೂರು ಸ್ಥಳದ ವೆಂಕಟಲಕ್ಷ್ಮಮ್ಮನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ 1903ನೇ ಇಸವಿ ಮಾರ್ಚಿ ತಾರೀಖು 20ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ ೧೯೦೩ನೇ ಇಸವಿ ಫೆಬ್ರವರಿ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್.

ತುಮಕೂರು ಮುನ್ಸೀಫ್ ಕೋರ್ಟಿನಲ್ಲಿ.

ಸ್ ೧೯೦೨ —03ನೇ ಇಸವಿ ವಿ॥ ಅರ್ಜಿ ನಂಬರು 497.

ಮೃತಪಟ್ಟ ಚರುಸುಬ್ಬಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರು, ಶಿವರಾಮಯ್ಯ, ಮೈನರ್ ಗಾರ್ಡಿಯರ್ ತಾಯಿ ಕಾಮಾಕ್ಷಮ್ಮನು, ಕುಣಿಗಲ್‌ನಲ್ಲಿ ವಾಸ ಮಾಡುತ್ತಿದ್ದ ಛವುತಿ ಚರುಸುಬ್ಬಯ್ಯನಿಗೆ ಮೈನರ್ ಅರ್ಜೀದಾರ ಮಗನಾಗಬೇಕೆಂಬ ಹಕ್ಕುದಾರಿಯೇಲೆ ಛವುತಿ ಚರುಸುಬ್ಬಯ್ಯನಿಗೆ ಬರಬೇಕಾದ 82—11—10 ರೂಪಾಯಿಗಳನ್ನ ವಸೂಲ್ ಮಾಡಿಕೊಳ್ಳತಕ್ಕ ಬಗ್ಯೆ ಸ್ ೧೯೦೧ನೇ ಇಸವಿ VIIನೇ ನಂಬರ್ ಸಕ್ಸೆಷರ್ ಸರ್ಟಿಫಿಕೇಟ್ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚ್ ತಿಂಗಳು ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚರುಸುಬ್ಬಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಫೆಬ್ರವರಿ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣವಾಗಿದೆ.

ಸ್ ೧೯೦೨—1903ನೇ ಇಸವಿ ವಿ॥ ನಂಬರ್ 498.

ಮೃತಪಟ್ಟ ಲಕ್ಷ್ಮಕ್ಕಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರು 1ನೇ ನಾಗವ್ವ, 2ನೇ ಸರಸವ್ವ ಇವರುಗಳ ಪೈಕಿ ಮೃತಪಟ್ಟ ಸದರೀ ಲಕ್ಷ್ಮಕ್ಕಯ್ಯನಿಗೆ 1ನೇ ಅರ್ಜೀದಾರಳು ಹೆಂಡತಿ ಆಗಬೇಕೆಂತಲು 2ನೇ ಅರ್ಜೀದಾರಳು ಮಗನ ಹೆಂಡತಿ ಆಗಬೇಕೆಂತಲು ತುಮಕೂರು ತಾಲ್ಲೂಕು ಹೊನ್ನುಡಿಕೆ ಸಮ್ಮತು ಜೋಲುಮಾರನಹಳ್ಳಿ ವಾಸಸ್ಥನಾಗಿ ಮೃತಪಟ್ಟ ಸದರಿ ಲಕ್ಷ್ಮಕ್ಕಯ್ಯನ ಜೆಂದಗಿ ಬಗ್ಯಾಗಿ ಬರತಕ್ಕ 245—8—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳತಕ್ಕ ಬಗ್ಯೆ ಸದರಿ ಗ್ರಾಮದಲ್ಲಿ ವಾಸಮಾಡುವ ಸದರಿ ಅರ್ಜೀದಾರು, ಸ್ ೧೯೦೧ನೇ ಇಸವಿ VIIನೇ ನಂಬರ್ ಸಕ್ಸೆಷರ್ ಸರ್ಟಿಫಿಕೇಟ್ ರೆಗ್ಯುಲೇಷರ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚ್ ತಿಂಗಳು ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮಕ್ಕಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಫೆಬ್ರವರಿ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣವಾಗಿದೆ.

ಸ್ ೧೯೦೨—1903ನೇ ಇಸವಿ ವಿ॥ ನಂಬರ್ 510.

ಮೃತಪಟ್ಟ ಕವನಿಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರು 1ನೇ ಬೆಟ್ಟಯ್ಯ, 2ನೇ ಲಿಂಗೈಯ್ಯ ಮೈನರ್‌ಗಳು, ಗಾರ್ಡಿಯರ್ ತಾಯಿ ಕೆಂಪಮ್ಮನು, ಮೃತಪಟ್ಟ ಸದರಿ ಹುಣಸೂರು ಕವನಿಗೌಡನಿಗೆ ಸದರಿ ಅರ್ಜೀದಾರು ಮಕ್ಕಳಾಗಬೇಕೆಂಬ ಹಕ್ಕುದಾರಿ ಮೇಲೆ ತುರ್ವೇಕೆರೆ ಸಬ್ ತಾಲ್ಲೂಕು ಮಾರಿಸಂದ್ರದ ಸಮ್ಮತು ಕಣಕೂರಲ್ಲಿ ವಾಸವಾಡುವ ಸದರೀ ಅರ್ಜೀದಾರು, ಸದರೀ ಗ್ರಾಮದಲ್ಲಿ ವಾಸವಾಡುತ್ತಿದ್ದ ಮೃತಪಟ್ಟ ಸದರೀ ಹುಣಸೂರು ಕವನಿಗೌಡನ ಜೆಂದಗಿ ಬಗ್ಯಾಗಿ ಬರತಕ್ಕ 17—12—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ್ ಸಕ್ಸೆಷರ್ ಸರ್ಟಿಫಿಕೇಟ್ ರೆಗ್ಯುಲೇಷರ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ಅರ್ಜೀದಾರಳ ಅರ್ಜಿಯನ್ನು 1903ನೇ ಇಸವಿ ಮಾರ್ಚ್ ತಿಂಗಳು 12ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಹುಣಸೂರು ಕವನಿಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಾಗಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಫೆಬ್ರವರಿ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣವಾಗಿದೆ.

ಎಸ್. ಶೇಷಗಿರಿರಾವ್,
ಮುನ್ಸೀಫ್.

ನೋಟಿಸ್.

ಸಿವಿಲ್ ಪ್ರೊಸೀಡರು ಕೋಡು 30ನೇ ಸೆಕ್ಷರ್ಷನ್ನೇರೆ.

ಮೈಸೂರು ಪ್ರೆಸಿಡೆನ್ಸಿ ಮುನ್ಸೀಫ್ ಕೋರ್ಟಿನಲ್ಲಿ.

1902—1903ನೇ ಇಸವಿ ಸಿವಿಲ್ ವ್ಯಾಜ್ಯದ ನಂಬರು 125.

ವಾದಿ.	ಪ್ರತಿವಾದಿ.
ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದೀಲಿ ಇರುವ ವ್ಯಾಪಾರ ಕಸಬಿನ ಕರಿಯಂಣಾ.	1ನೇ ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದೀಲಿ ಇರುವ ನೆಕ್ಕದ ಅಂಗಡೀ ದಾವ್ಲೂದುಸಾಬಿ. 2ನೇ ಸದರೀ ಸ್ಥಳದಲ್ಲಿ ಇರುವ ಆಕ್ಕಿ ಅಂಗಡಿ ಬುರ್ಡಸಾಬಿ. 3ನೇ ಸದರೀ ಸ್ಥಳದಲ್ಲಿ ಇರುವ ನೆಕ್ಕದ ಅಂಗಡಿ ದಾದೂಮಿಯ್ಯಾ.

ಇದರಿಂದ ಮೈಸೂರು ಮಂಡಿ ಮೊಹಲಾ ನಕ್ಷೆಬಂದು ಬೀದಿಯಲ್ಲಿ ಇರುವ ಮುಸಲ್‌ಮಾನರ ಜಾತಿ ಜನಗಳಿಗೆ ತಿಳಿಯಪಡಿಸುವ ದೇನಂದರೆ, ಮೇಲ್ಕಂಡ ಸಿವಿಲ್ ನಂಬರಿನಲ್ಲಿ ಈ ಕೆಳಗೆ ವಿವರಿಸುವ ಷೆಡ್ಯೂಲಿನಲ್ಲಿ ಕಂಡ ಮನೆಗೆ ವಾದಿಯು ದಾವಾ ತಂದು ಇರುವದ್ದರಿಂದ ಈ ದಾವಾಕ್ಕೆ ಕಕ್ಷಿಗಾರರಾಗಿ ಶೇರತಕ್ಕ ಇಪ್ಪವುಳ್ಳವರು 1903ನೇ ಇಸವಿ ಮಾರ್ಚ್ ತಿಂಗಳು 18ನೇ ತಾರೀಖು ಬುಧವಾರ ದಿವಿ 11 ಘಂಟೆಗೆ ಈ ಕೋರ್ಟು ರೂಬರೂಬು ಹಾಜರಾಗಿ ತಮ್ಮತಮ್ಮ ಹಕ್ಕು ಬಾಧ್ಯತೆಯನ್ನು ಸ್ಥಾಪಿಸಿಕೊಳ್ಳತಕ್ಕದ್ದಿದೆ.

ಬ ತಾರೀಖು 28ನೇ ಫೆಬ್ರವರಿ 1903ನೇ ಇಸವಿ.

ಷೆಡ್ಯೂಲ್.

ಮೈಸೂರು ಮಂಡಿ ಮೊಹಲಾ ನಕ್ಷೆಬಂದು ಬೀದಿಯಲ್ಲಿ ಇರುವ ಪೂರ್ವಕ್ಕೆ—ರತ್ನಸಿಂಗ್‌ಯವರ ಅಂಗಡಿ ಮತ್ತು ಮಾಯಂಣ್ಣ ಮನೆ. ಪಶ್ಚಿಮಕ್ಕೆ—ಕರಿಯಂಣನ ಅಂಗಡೀ ಹಿತ್ತಲೂ ಸಹ. ದಕ್ಷಿಣಕ್ಕೆ—ರೋಡು. ಉತ್ತರಕ್ಕೆ—ಗರಡೀ ಪಾಳುಜಾಗಾ. ಈ ಮಧ್ಯೆ ಇರುವ ಪೊಟ್ಟೆ ಮನೆ. ಪೂರ್ವಪಶ್ಚಿಮ ಗಜಾ $5\frac{1}{2}$, ದಕ್ಷಿಣೋತ್ತರ ಗಜಾ 7 ಅಡಿ 2 ಗೋಡೆ ಸಹಾ ಮೆಳ್ಳದ್ದು ಮತ್ತು ಇದಕ್ಕೆ ಸಂಬಂಧಪಟ್ಟ ಚರಸ್ವತ್ತು ಸಹಾ.

ಆನಂದರಾವ್ ಸಿರಸಿ,
ಪ್ರಿನಸಪಲ್ ಮುನ್‌ಶೀಫ್.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ್. ಬೆಂಗಳೂರು, ತಾರೀಖು 7ನೇ ಫೆಬ್ರವರಿ 1903.

1903ನೇ ಇಸವಿ ಲೋವರ್ ಸೆಕಂಡರೀ ಪರೀಕ್ಷೆಗೆ ನೇಮಕವಾಗಿರುವ ಹೊಸ ಪದ್ಯಸಾರವು (Iನೇ ಭಾಗ) ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್‌ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತೆ. ಅದರ ಖರೀದಿ ಪ್ರತಿ 1ಕ್ಕೆ 5 ಆಣೆಗಳು.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

Mysore Government Central Press, Bangalore—1903.